ಎದುರಿಸಲಾಗಲಿಲ್ಲ. ಅವನಿಗೆ ಕಳ್ಳರ ಮೇಲೆ ಅತಿಯಾದ ಕೋಪ ಬಂದಿತ್ತು. ಆದರೆ, ಅವರೆಲ್ಲ ಸೋಮನಿಗಿಂತ ಬಲಿಷ್ಠರಾಗಿದ್ದುದರಿಂದ ಅವರನ್ನು ಶಕ್ತಿಯಿಂದ ಸೋಲಿಸುವುದು ಅಸಾಧ್ಯವಾಗಿತ್ತು. ಅವನು ಹೇಗಾದರೂ ಮಾಡಿ ಆ ಕಳ್ಳರಿಗೆ ತಕ್ಕ ಶಾಸ್ತಿ ಮಾಡಬೇಕೆಂದು ಯೋಚಿಸಿದ.

ಕೆಲದಿನಗಳ ನಂತರ ಸೋಮ ಮತ್ತೆ ಕೆಲಸಕ್ಕೆಂದು ಪಕ್ಕದೂರಿನ ಸಾಹುಕಾರರ ಮನೆಗೆ ಹೋದ. ಸಾಹುಕಾರರಿಗೆ ನಡೆದ ಘಟನೆಯನ್ನು ತಿಳಿಸಿ ಬಿಕ್ಕಿಬಿಕ್ಕಿ ಅತ್ತ. ಸಾಹುಕಾರರು ಸೋಮನಿಗೆ ಸಮಾಧಾನ ಮಾಡಿ, 'ಸೋಮ, ಕೆಲಸ ಮುಗಿಸಿ ಹೋಗುವಾಗ ನಮ್ಮ ನಾಯಿ ಕಾಳನನ್ನು ನಿನ್ನ ಜೊತೆ ಕರೆದುಕೊಂಡು ಹೋಗು' ಎಂದರು. ಸಾಹುಕಾರರ ನಾಯಿ ಕಳ್ಳರನ್ನು ಹಿಡಿಯುವ ತರಬೇತಿ ಪಡೆದಿತ್ತು. ಅದೇ ರೀತಿ ಸೋಮ ಆ ದಿನ ಕೆಲಸ ಮುಗಿಸಿಕೊಂಡು ಸಂಜೆ ವೇಳೆಗೆ ತನ್ನೂರಿಗೆ ನಾಯಿ ಕಾಳನೊಂದಿಗೆ ಹಿಂದಿರುಗುತ್ತಿದ್ದ. ಕತ್ತಲಾಗುತ್ತಿದ್ದಂತೆ ಅದೇ ಕಳ್ಳರ ಗುಂಪು ಹಾದಿಯಲ್ಲಿ ಬರುವವರನ್ನು ಅಡ್ಡಗಟ್ಟಿ ದರೋಡೆ ಮಾಡುತ್ತಿತ್ತು. ಅವರ ಕೈಗೆ ಸೋಮ ಮತ್ತೊಮ್ಮೆ ಸಿಕ್ಕಿಬಿದ್ದ. ಸೋಮನನ್ನು ತಡೆದ ಕಳ್ಳರು ಅವನ ಬಳಿಯಿದ್ದ ಹಣವನ್ನು ಕಸಿದುಕೊಂಡರು. ಸೋಮ ಪ್ರತಿಭಟಿಸಲು ಮುಂದಾದಾಗ ಕಳ್ಳರು ಅವನನ್ನು ಹೊಡೆದರು. ಒಡನೆಯೇ ನಾಯಿ ಕಾಳ ಕಳ್ಳರ ಮೇಲೆರಗಿ ಕಚ್ಚತೊಡಗಿತು. ನಾಯಿಯ ದಾಳಿಗೆ ಬೆದರಿದ ಕಳ್ಳರು ದಿಕ್ಕಾಪಾಲಾಗಿ ಓಡತೊಡಗಿದರು. ಅವರಲ್ಲಿ ಒಬ್ಬನ ಬಳಿ ಹಣದ ಗಂಟಿತ್ತು. ಹಣದ ಗಂಟು ಹಿಡಿವನನ್ನು ಸೋಮ ತೋರಿಸುತ್ತಾ, 'ಅವನನ್ನು ಹಿಡಿ ಕಾಳ ಹಿಡಿ' ಎಂದ. ಕಾಳ ಆ ಕಳ್ಳನ ಮೇಲೆರಗಿ ಹಣದ ಗಂಟನ್ನು ಕಚ್ಚಿಕೊಂಡು ಸಡಗರಪುರದೆಡೆಗೆ ಓಡತೊಡಗಿತು. ಬಳಿಕ ಉಳಿದ ಕಳ್ಳರೆಲ್ಲರೂ ನಾಯಿಯಿಂದ ಗಂಟನ್ನು ಬಿಡಿಸಿಕೊಳ್ಳಲು ಕಲ್ಲುಗಳನ್ನು ಅದರತ್ತ ಬೀಸುತ್ತ ಅಟ್ಟಿಸಿಕೊಂಡು ಹೋದರು. ತುಸು ದೂರ ಓಡಿಬಂದ ನಾಯಿ, ರಸ್ತೆಯ ಪಕ್ಕದಲ್ಲಿದ್ದ ಬಾವಿಗೆ ಹಣದ ಗಂಟನ್ನು ಹಾಕಿ, ಊರಕಡೆಗೆ ಓಡಿ ಹೋಯಿತು. ಹಣದ ಗಂಟು ಬಾವಿಗೆ ಬೀಳುವಾಗ ಗಂಟು ಬಿಚ್ಚಿಹೋಗಿ, ಅದರಲ್ಲಿದ್ದ ನಾಣ್ಯಗಳೆಲ್ಲ ಆಳವಾದ ನೀರಿನಲ್ಲಿ ಬಿದ್ದು ತಳಸೇರಿದವು. ಕಳ್ಳರು ಬಾವಿಯೊಳಗೆ ಕಗ್ಗತ್ತಲಿನಲ್ಲಿ ಇಳಿಯಲು ಅಂಜಿದರು.

ಮಾರನೇ ದಿನ ಬೆಳಗ್ಗೆ ಬಂದು ಬಾವಿಯಿಂದ ನಾಣ್ಯಗಳನ್ನು ತೆಗೆದುಕೊಂಡು ಹೋಗುವ ತೀರ್ಮಾನಕ್ಕೆ ಬಂದ ಕಳ್ಳರು ಅಲ್ಲಿಂದ ಹೊರಟರು. ಮರೆಯಲ್ಲಿ ನಿಂತು ಇದನ್ನೆಲ್ಲ ನೋಡುತ್ತಿದ್ದ ಸೋಮನಿಗೆ ಒಂದು ಉಪಾಯ ಹೊಳೆಯಿತು. ಅವನು ಅವಸರವಾಗಿ ಮನೆಯನ್ನು ತಲುಪಿ, ಒಂದೆಡೆ ಇಟ್ಟಿದ್ದ ಅಯಸ್ಕಾಂತದ ತುಂಡು ಮತ್ತು ರೇಷ್ಮೆದಾರದ ಉಂಡೆಯನ್ನು ತೆಗೆದುಕೊಂಡು ಬಾವಿಯ ಬಳಿ ಬಂದ. ಬಾವಿಯ ಕಟ್ಟೆಯ ಮೇಲೆ ಕುಳಿತು ರೇಷ್ಮೆದಾರವನ್ನು ಅಯಸ್ಕಾಂತಕ್ಕೆ ಬಿಗಿದು ಬಾವಿಯೊಳಗೆ ಇಳಿಬಿಟ್ಟ. ಅಯಸ್ಕಾಂತವು ಬಾವಿಯ ತಳ ಮುಟ್ಟಿದೊಡನೆ ನಾಣ್ಯಗಳೆಲ್ಲ ಅದಕ್ಕೆ ಅಂಟಿಕೊಂಡವು. ದಾರವನ್ನು ಮೇಲೆತ್ತಿ ನಾಣ್ಯಗಳನ್ನು ಬಿಡಿಸಿಕೊಂಡು ಚೀಲಕ್ಕೆ ಹಾಕಿಕೊಂಡ ಸೋಮ, ಪುನಃ ಬಾವಿಯೊಳಗೆ ಅಯಸ್ಕಾಂತವನ್ನು ಇಳಿಬಿಟ್ಟ. ಉಳಿದೆಲ್ಲಾ ನಾಣ್ಯಗಳನ್ನು ಅಯಸ್ಕಾಂತವು ಆಕರ್ಷಿಸಿತು. ನಾಣ್ಯಗಳನ್ನೆಲ್ಲ ಚೀಲಕ್ಕೆ ಹಾಕಿಕೊಂಡ ಸೋಮ ಮನೆಗೆ ಹೋದ.

ಮರುದಿನ ಹಗಲಿನಲ್ಲಿ ಕಳ್ಳರು ಹಗ್ಗದ ಸಹಾಯದಿಂದ ಬಾವಿಯೊಳಗೆ ಇಳಿದು ನೀರಿನ ತಳದಲ್ಲಿ ನಾಣ್ಯಗಳನ್ನು ಹುಡುಕುತ್ತಿದ್ದರು. ಅಷ್ಟರಲ್ಲಿ ಸೋಮ ಸಾಹುಕಾರರ ಸಹಾಯದಿಂದ ಸಮೀಪದ ಪೊಲೀಸರಿಗೆ ಸುದ್ದಿ ಮುಟ್ಟಿಸಿ ಅವರನ್ನು ಬಾವಿಯ ಬಳಿ ಕರೆತಂದ. ಪೊಲೀಸರ ಕೈಗೆ ಸಿಗದೇ ತಲೆಮರೆಸಿಕೊಂಡಿದ್ದ ಕಳ್ಳರು ಈಗ ಬಾವಿಯೊಳಗೆ ಬಂದಿಯಾಗಿದ್ದರು. ಕಳ್ಳರನ್ನು ವಶಕ್ಕೆ ಪಡೆದ ಪೊಲೀಸರು ಸೋಮನಿಗೆ ಬಹುಮಾನ ನೀಡಿ, ಸಾಹುಕಾರರಿಗೆ ಮತ್ತು ನಾಯಿ ಕಾಳನಿಗೆ ಅಭಿನಂದನೆಗಳನ್ನು ತಿಳಿಸಿದರು. ಸೋಮ ಬಹುಮಾನದ ಹಣದಿಂದ ವಿದ್ಯಾಭ್ಯಾಸ ಮುಂದುವರಿಸಿದ. ●